ತ್ಯಾಜ್ಯ ಪ್ಲಾಸ್ಟಿಕ್ಕನ್ನೆಲ್ಲ ಮರುಬಳಕೆ ಮಾಡೋಕೆ ಅಂತ ಮತ್ತೆ ಫ್ಯಾಕ್ಟರಿಗೆ ಕಳಿಸುವ ವ್ಯವಸ್ಥೆ ಆಗಿದೆ.

**ಅವಳು:** ಅರ್ಥ ಆಯ್ತಾ? 'ಗಾಂಧೀಜಿ ಈಗ ಇದ್ದಿದ್ದರೆ' ಅಂತ ನೊಂದ್ಕೋಬಾರದು. ಅವರು ಈಗಲೂ ಇದ್ದಾರೆ... ಅವರ ಸಂದೇಶಗಳು, ಆದರ್ಶಗಳು ದೂರದೂರದ ದೇಶಗಳಲ್ಲಿ ಈಗಲೂ ಪಾಲನೆ ಆಗ್ತಾ ಇವೆ. ಅವರ 150ನೇ ಜಯಂತಿಯಲ್ಲಿ ವಿಶ್ವಸಂಸ್ಥೆಯವರು ಗಾಂಧೀ ಅಂಚೆ ಚೀಟಿಯನ್ನ ಬಿಡುಗಡೆ ಮಾಡಿದ್ದರು. ನ್ಯೂಯಾರ್ಕ್ ಸಮೀಪದ ಲಾಂಗ್ ಐಲ್ಯಾಂಡ್ ಅನ್ನೋ ದ್ವೀಪದಲ್ಲಿ 150 ಗಿಡಗಳನ್ನು ನೆಡೋಕೆ ಅಂತ ನಿರ್ಧಾರ ಮಾಡಿ ಅಲ್ಲಿನ ಮೂರು ಸಂಸ್ಥೆಗಳು ಅದಕ್ಕೆ "ಗಾಂಧೀ ಶಾಂತಿ ತೋಟ" ಅಂತ ಹೆಸರಿಟ್ಟಿದ್ದಾರೆ. ದೂರ ದೇಶಗಳಲ್ಲಿ ಅಷ್ಟೇ ಅಲ್ಲ, ದೂರದ ಭವಿಷ್ಯದಲ್ಲೂ ಗಾಂಧೀಜಿಯ ನೆನಪು ಇರಬೇಕು ಅಂತ.

**ಅವನು:** ಅಷ್ಟೇ ಅಲ್ಲ, ವಿಶ್ವಸಂಸ್ಥೆಯಲ್ಲಿ ಗಾಂಧೀಜಿಯ ಇನ್ನೂ ದೊಡ್ಡ ಹೊಸ ಸ್ಮಾರಕ ನಿರ್ಮಾಣ ಆಗಿದೆ. ನ್ಯೂಯಾರ್ಕ್ ನಗರದಲ್ಲಿ ವಿಶ್ವಸಂಸ್ಥೆಯ ಮುಖ್ಯ ಕಚೇರಿ ಇದೆಯಲ್ಲ? ಆ ಬೃಹತ್ ಕಟ್ಟಡದ ಮೇಲಂತಸ್ತಿನಲ್ಲಿ ಒಂದು "ಗಾಂಧೀ ಸೋಲಾರ್ ಪಾರ್ಕ್" ಮಾಡಿದಾರೆ ಗೊತ್ತಾ? ಗಾಂಧೀಜಿ ಎಂದರೆ ಭಾರತವೇ ವಿಶ್ವಕ್ಕೆ ಕೊಟ್ಟ ಕಾಣಿಕೆ ಎಂಬರ್ಥದಲ್ಲಿ ನಮ್ಮ ದೇಶವೇ ಅದರ ವೆಚ್ಚವನ್ನೆಲ್ಲ ಭರಿಸಿದೆ. ಅಲ್ಲಿ 193 ದೇಶಗಳನ್ನು ಪ್ರತಿನಿಧಿಸುವ 193 ಸೋಲಾರ್ ಪ್ಯಾನೆಲ್ ಹಾಕಿ, ಐವತ್ತು ಕಿಲೊವಾಟ್ ವಿದ್ಯುತ್ ಉತ್ಪಾದನೆ ಆಗ್ತಾ ಇದೆ. ಅಷ್ಟೊಂದು ದೇಶಗಳು ಒಟ್ಟಾಗಿ ಅಲ್ಲಿ ಆಗಾಗ ನಡೆಸುವ ಮಹಾಸಭೆಗಳಿಗೆಲ್ಲ ಗಾಂಧೀಜಿಯ ಹೆಸರಿನ ಸೌರ ಫಲಕಗಳಿಂದಲೇ ಬೆಳಕು ಸೂಸುತ್ತದೆ.

**ಮಗು:** ಎಷ್ಟು ಚಂದ ಅಲ್ವಾ? ಆ ಸಭೆಗೆ ಬರೋರೆಲ್ಲ ಅವರ ಮೊಬೈಲ್ ಮತ್ತೆ ಟ್ಯಾಬ್ಲೆಟ್‌ಗೆ ಅಲ್ಲೇ ರೀಚಾರ್ಜ್ ಮಾಡಿಸ್ಕೊಂಡು ತಂತಮ್ಮ ದೇಶಕ್ಕೂ ಒಯ್ಯಬಹುದು.

### ನಾಗೇಶ ಹೆಗಡೆ

ಪತ್ರಕರ್ತ, ಪರಿಸರವಾದಿ, ವಿಜ್ಞಾನ ಬರಹಗಳ ಲೇಖಕ ನಾಗೇಶ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಬಕ್ಕೆಮನೆ ಎಂಬ ಹಳ್ಳಿಯವರು. 'ಪ್ರಜಾವಾಣಿ'ಯಲ್ಲಿ ಸುಮಾರು 38 ವರ್ಷಗಳಷ್ಟು ದೀರ್ಘ ಕಾಲದಿಂದ ಪ್ರಕಟವಾಗುತ್ತಿರುವ 'ವಿಜ್ಞಾನ ವಿಶೇಷ' ಅಂಕಣದಲ್ಲಿ ವಿಜ್ಞಾನ ಕ್ಷೇತ್ರದ ವಿದ್ಯಮಾನಗಳನ್ನು ಸ್ವಾರಸ್ಯಕರವಾಗಿ ಬರೆಯುತ್ತ ಬಂದಿದ್ದಾರೆ. ಅವರ ಮೊದಲ ಪುಸ್ತಕ 'ಇರುವುದೊಂದೇ ಭೂಮಿ' ಪರಿಸರಕ್ಕೆ ಸಂಬಂಧಿಸಿದಂತೆ ಅನೇಕ ಚರ್ಚೆಗಳನ್ನು ಹುಟ್ಟುಹಾಕಿದೆ.

40ಕ್ಕೂ ಹೆಚ್ಚು ವಿಜ್ಞಾನ/ಪರಿಸರ ಬರಹಗಳ ಪುಸ್ತಕಗಳನ್ನು ಬರೆದಿರುವ ಅವರು, 'ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ' ಹೆಸರಿನ ಲಘುಪ್ರಬಂಧ ಸಂಕಲನವನ್ನೂ, ಮಕ್ಕಳಿಗಾಗಿ 'ಕೆರೆಯಲಿ ಚಿನ್ನ, ಕೆರೆಯೇ ಚಿನ್ನ' ಎಂಬ ಪುಸ್ತಕವನ್ನೂ ಪ್ರಕಟಿಸಿದ್ದಾರೆ. ಕನ್ನಡ ಮಕ್ಕಳ ಸಾಹಿತ್ಯಕ್ಕೆ ಬಿಗ್‌ಲಿಟ್ಲ್ ಬುಕ್ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಗಾಂಧೀ ತತ್ತ್ವಚಿಂತನೆಗಳನ್ನು ಪ್ರತಿಪಾದಿಸುವ ಕನ್ನಡ ಸಾಹಿತ್ಯ ಕೃತಿಗೆ ನೀಡುವ 'ಸಿದ್ದವನಹಳ್ಳಿ ಕೃಷ್ಣ ಶರ್ಮ ಪ್ರಶಸ್ತಿ' ಈ ಲೇಖಕರ 'ಭೂಮಿಯೆಂಬ ಗಗನನೌಕೆ' ಹೆಸರಿನ ಪುಸ್ತಕಕ್ಕೆ ಲಭಿಸಿದೆ.